

# ಎಸ್ಪಿಬಿ ಗಾನ ಯಾನ

ಎಸ್ಪಿ ಬಾಲಸುಬ್ರಮಣ್ಯಂ ಅಮೆರಿಕದ ಪ್ರವಾಸದಲ್ಲಿದ್ದಾರೆ. ಸಂಗೀತ ಕ್ಷೇತ್ರಕ್ಕೆ ಕಾಲಿಟ್ಟು 50 ವರ್ಷಗಳಾದ ನೆನಪಿಗೆ ಅವರು ಸಂಗೀತಯಾತ್ರೆ ಕೈಗೊಂಡಿದ್ದಾರೆ. ಈಗಾಗಲೆ 8 ಕಾರ್ಯಕ್ರಮಗಳು ಮುಗಿದಿವೆ, ಇನ್ನೂ ನಾಲ್ಕು ಕಾರ್ಯಕ್ರಮಗಳು ನಡೆಯಬೇಕಿವೆ. ಕಳೆದ ವರ್ಷದಿಂದೀಚೆಗೆ ಮಾಸ್ಕೊ, ಸಿಂಗಾಪುರ, ದಕ್ಷಿಣ ಆಫ್ರಿಕಾ, ದುಬೈ ಮುಂತಾಗಿ ಹಲವೆಡೆ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದರೂ ಈ ಅಮೆರಿಕ ಪ್ರವಾಸ ಎಸ್ಪಿ ಅವರಿಗೆ ಮಹತ್ವದ್ದಾಗಿ ಪರಿಣಮಿಸಿದೆ. ಏಕೆಂದರೆ ಆರಂಭದ ಆರು ಕಾರ್ಯಕ್ರಮಗಳನ್ನು ಬಿಟ್ಟರೆ ಉಳಿದ ಕಾರ್ಯಕ್ರಮಗಳಲ್ಲಿ ಎಸ್ಪಿ ಅವರು ಇಳಯರಾಜ ಸಂಗೀತ ನಿರ್ದೇಶನದ ಹಾಡುಗಳನ್ನು ಹಾಡುತ್ತಿಲ್ಲ. ಹಾಡದಂತೆ ನೋಟಿಸ್ ನೀಡಲಾಗಿದೆ!

ಎಸ್ಪಿ ಸಂಗೀತಸಂಜೆ ಕಾರ್ಯಕ್ರಮಗಳಲ್ಲಿ ಇಳಯರಾಜ ನಿರ್ದೇಶನದ ಹಾಡುಗಳಿಲ್ಲ ಎಂದರೆ ಹೇಗೆ? ದಕ್ಷಿಣ ಭಾರತದ ಭಾಷೆಗಳ, ಅದರಲ್ಲೂ ತಮಿಳಿನ ಬಹುತೇಕ 'ಸೂಪರ್ ಹಿಟ್' ಸಿನಿಮಾ ಹಾಡುಗಳೆಂದರೆ ಅವು ಎಸ್ಪಿಬಿ– ಎಸ್.ಜಾನಕಿ ಮತ್ತು ಇಳಯರಾಜ ಎಂಬ ತ್ರಿಮೂರ್ತಿಗಳ ಸಂಗಮದ್ದೇ ಆಗಿದೆ. ಇಳಯರಾಜ ಸಂಗೀತವನ್ನು ಬಿಟ್ಟೂ ಎಸ್ಪಿಬಿ ಸಾವಿರಾರು ಹಾಡುಗಳನ್ನು ಹಾಡಬಹುದು. ಏಕೆಂದರೆ ಅವರೀಗಾಗಲೆ 40 ಸಾವಿರಕ್ಕೂ ಹೆಚ್ಚು ಸಿನಿಮಾ ಹಾಡುಗಳನ್ನು ಹಾಡಿ ವಿಶ್ವದಾಖಲೆ ಮಾಡಿದವರು. ಹಿಂದಿ, ತೆಲುಗು, ಕನ್ನಡದಲ್ಲಂತೂ ಎಸ್ಪಿಬಿ ಹಾಡಿದ ಸಾವಿರಾರು ಸೂಪರ್‌ಹಿಟ್ ಹಾಡುಗಳಿವೆ. ಅದೇನೇ ಇದ್ದರೂ ಇಳಯರಾಜ ಜತೆಗಿನ ಎಸ್ಪಿಬಿಯವರ ಗಾಯನ– ಸಂಗೀತ ಮೈತ್ರಿ ವಿಶಿಷ್ಟದ್ದೂ, ಅಪರೂಪದ್ದೂ ಹೌದು. ಎಸ್ಪಿಬಿ ಅವರ ಅಮೆರಿಕ ಯಾತ್ರೆಯ ನಡುವೆಯೇ ಬಂದಪ್ಪಳಿಸಿದ ಇಳಯರಾಜ ವಕೀಲರ ಕೋರ್ಟ್ ನೋಟಿಸ್ ಈಗ ಎಸ್ಪಿಬಿ ಬಾಯಿ ಕಟ್ಟಿ ಹಾಕಿದೆ. ಪೂರ್ವಾನುಮತಿ ಇಲ್ಲದೆ, ರಾಯಲ್ಟಿ ನೀಡುವ ಒಪ್ಪಂದ ಮಾಡದೆ ಇಳಯರಾಜ ಅವರ ಸಂಗೀತ ನಿರ್ದೇಶನದ ಹಾಡುಗಳನ್ನು ಈಗ ಎಸ್ಪಿಬಿ ಮಾತ್ರವಲ್ಲ, ಬೇರೆ ಯಾರೂ ಹಾಡುವಂತಿಲ್ಲ.

ಹಾಗೆ ನೋಡಿದರೆ ಎಸ್ಪಿಬಿ ಮತ್ತು ಇಳಯರಾಜ ಆತ್ಮೀಯ ಸ್ನೇಹಿತರು. ಇಳಯರಾಜಾ ವಯಸ್ಸಿನಲ್ಲಿ 3 ವರ್ಷ ದೊಡ್ಡವರು ಎನ್ನುವುದು ಬಿಟ್ಟರೆ ವೃತ್ತಿಯಲ್ಲಿ ಇಬ್ಬರೂ ಸಮಕಾಲೀನರೇ. ಎಸ್ಪಿಬಿ ಎಂಜಿನಿಯರಿಂಗ್ ಓದುತ್ತಿದ್ದಾಗ ತಮ್ಮದೊಂದು ಸಂಗೀತ ತಂಡ ಕಟ್ಟಿಕೊಂಡಿದ್ದರು. ಅದರಲ್ಲಿ ಇಳಯರಾಜ ಮೊದಲು ಗಿಟಾರ್ ಮತ್ತು ಬಳಿಕ ಹಾರ್ಮೋನಿಯಂ ನುಡಿಸುತ್ತಿದ್ದವರು. ತಮಿಳಿನ ಖ್ಯಾತ ಸಂಗೀತ ನಿರ್ದೇಶಕ ಗಂಗೈ ಅಮರನ್ ಕೂಡಾ ಈ ತಂಡದಲ್ಲಿದ್ದರು. ಅಲ್ಲಿಂದೀಚೆಗೆ ಇಬ್ಬರ ಸ್ನೇಹಕ್ಕೆ ಯಾವ ಕುಂದೂ ಆಗಿಲ್ಲ. ಈಗಾಗಲೆ ಎಸ್ಪಿಬಿ ಮತ್ತು ರಾಜ ವೇದಿಕೆಯ ಮೇಲೆ ಜತೆಯಾಗಿ ಸಾವಿರಾರು ಹಾಡುಗಳನ್ನು ಪ್ರಸ್ತುತಪಡಿಸಿದ್ದಾರೆ. ಆದರೆ ಇದು ರಾಯಲ್ಟಿಯ ಕಾಲ. ಎಲ್ಲವೂ ವಾಣಿಜ್ಯಮಯ. ಸಂಗೀತವೂ ಇದರಿಂದ ಹೊರತಲ್ಲ.

ಅಮೆರಿಕ ಪ್ರವಾಸದಲ್ಲಿ ಎಸ್ಪಿಬಿ ಅವರ ಪಾಸ್‌ಪೋರ್ಟ್ ಮತ್ತು ಕ್ರೆಡಿಟ್ ಕಾರ್ಡ್ ಗಳಿದ್ದ ಬ್ಯಾಗ್ ಕೂಡಾ ಕಳವಾಗಿದ್ದು ಮತ್ತೊಂದು ಸುದ್ದಿ. ಆದರೆ ಅಲ್ಲಿನ ಭಾರತೀಯ ದೂತವಾಸದ ಅಧಿಕಾರಿಗಳು 24 ಗಂಟೆಗಳಲ್ಲಿ ಡುಪ್ಲಿಕೇಟ್ ಪಾಸ್ ಪೋರ್ಟ್ ಒದಗಿಸಿದ್ದಾರೆ. ಹಾಗಾಗಿ ಪ್ರವಾಸ ಮುಂದುವರಿದಿದೆ.

ಶ್ರೀಪತಿ ಪಂಡಿತಾರಾದ್ಯುಲು ಬಾಲಸುಬ್ರಹ್ಮಣ್ಯಂ ಎನ್ನುವ ಹೆಸರು ಮರೆತೇ ಹೋಗಿದೆ. ಎಸ್ಪಿಬಿ, 'ಜಂಟಲ್‌ಮ್ಯಾನ್' ಎನ್ನುವುದರಲ್ಲಿ ದೂಸ್ರಾ ಮಾತಿಲ್ಲ. ಯಾರ ಜತೆಗೂ ಜಗಳ ಮಾಡಿಕೊಂಡವರಲ್ಲ. ಎಲ್ಲರ ಜತೆಗೂ ಸ್ನೇಹಮಯಿ. ಒಮ್ಮೆ ಮೇಲುಕೋಟೆಯಲ್ಲಿ ಸಂಗೀತ ಕಾರ್ಯಕ್ರಮ ನೀಡಲು ಬಂದಾಗ ಸಂಘಟಕರಿಗೆ ಊಟ ಒದಗಿಸಲು ಆಗಲಿಲ್ಲ. ಅವರು ತಂದುಕೊಟ್ಟ ದೇವಾಲಯದ ಪ್ರಸಾದವನ್ನೇ ತಿಂದು ಹಾಡಿ ಬಂದವರು ಎಸ್ಪಿಬಿ! ಕನ್ನಡದಲ್ಲಿ ವಿಷ್ಣು, ಅಂಬಿ, ಶ್ರೀನಾಥ್, ಶಂಕರ್‌ನಾಗ್ ಮುಂತಾದವರ ಪಾತ್ರಕ್ಕೆ ಅಸಂಖ್ಯಾತ ಸಲ ಹಾಡಿರುವ ಎಸ್ಪಿಬಿ  ರಾಜ್‌ಕುಮಾರ್ ಪಾತ್ರಕ್ಕೂ ಕಂಠ ಒದಗಿಸಿದವರು. ಎಸ್ಪಿಬಿ ನಟಿಸಿದ ಪಾತ್ರಕ್ಕೆ ಡಾ.ರಾಜ್ ಅವರೂ ಹಾಡಿದ್ದಾರೆ ಎನ್ನುವುದು ಇನ್ನೂ ವಿಶೇಷ. ಎಸ್ಪಿಬಿ ಮೊತ್ತಮೊದಲು ಹಿನ್ನೆಲೆ ಗಾಯನ ನೀಡಿದ ತೆಲುಗು ಸಿನಿಮಾದ ಹೆಸರೇ 'ಶ್ರೀ ಶ್ರೀ ಶ್ರೀ ಮರ್ಯಾದಾ ರಾಮಣ್ಣ.' ಈ ಹೆಸರು ಎಸ್ಪಿಬಿ ವ್ಯಕ್ತಿತ್ವಕ್ಕೂ ಒಪ್ಪುತ್ತದೆ ಎನ್ನುತ್ತಾರೆ ಗೆಳೆಯರು. ಖ್ಯಾತ ಗಾಯಕ ಬಾಲಮುರಳಿಕೃಷ್ಣ ಎಸ್ಪಿಬಿ ಅವರನ್ನು ಬಾಲು ಎಂದು ಏಕವಚನದಲ್ಲೇ ಕರೆಯುತ್ತಿದ್ದರು. ಇನ್ನೊಬ್ಬ ಸಮಕಾಲೀನ ಜೇಸುದಾಸ್, ಎಸ್ಪಿಬಿ ಅವರಿಗೆ ಗುರುಸಮಾನ. ಜೇಸುದಾಸ್‌ರನ್ನು ಎಸ್ಪಿಬಿ ಅಣ್ಣಾ ಎಂದೇ ಕರೆಯುವುದು.

ಇಳಯರಾಜ ಅವರ ನಿರ್ಬಂಧದ ನೋಟಿಸ್‌ಗೆ ಎಸ್ಪಿಬಿ ನೀಡಿರುವ ಪ್ರತಿಕ್ರಿಯೆಯೂ ಅವರು ಜಂಟಲ್‌ಮ್ಯಾನ್ ಎಂದೇ ಸೂಚಿಸುತ್ತದೆ. 'ಇಳಯರಾಜ ನನಗೆ ಸಾಕಷ್ಟು ಅವಕಾಶ ನೀಡಿದ್ದಾರೆ. ಅವರಿಗೆ ನಾನು ಕೃತಜ್ಞ. ಆದರೆ ಅವರ ಸಂಗೀತ ನಿರ್ದೇಶನದ ಹಾಡಿಗೆ ನಾನೆಷ್ಟು ನ್ಯಾಯ ಸಲ್ಲಿಸಿದ್ದೇನೆ ಎನ್ನುವುದೂ ಮುಖ್ಯ' ಎಂದಿದ್ದಾರೆ ಎಸ್ಪಿಬಿ. ಮಾತು ಆರಕ್ಕೆ ಏರುವುದಿಲ್ಲ, ಮೂರಕ್ಕೆ ಇಳಿಯುವುದಿಲ್ಲ. ತಂದೆ ಹರಿಕಥಾ ಕಲಾವಿದರು ಮಾತ್ರವಲ್ಲ ರಂಗಭೂಮಿ ನಟರೂ ಹೌದು. ಇಬ್ಬರು ಸೋದರರು, ಐವರು ಸೋದರಿಯರ ದೊಡ್ಡ ಕುಟುಂಬ. ಅವರಲ್ಲಿ ಎಸ್ಪಿ ಶೈಲಜಾ ಹಿನ್ನೆಲೆ ಗಾಯಕಿಯಾಗಿ ಪ್ರಸಿದ್ಧರು.  ಮಗ ಎಸ್ಪಿಬಿ ಚರಣ್ ಕೂಡಾ ಗಾಯಕ, ಸಂಗೀತ ನಿರ್ದೇಶಕ ಮತ್ತು ನಿರ್ಮಾಪಕ.

ಹರೆಯದಲ್ಲಿ ತಮ್ಮ ಸಂಗೀತ ತಂಡದಲ್ಲಿ ಹಾರ್ಮೋನಿಯಂ ಮತ್ತು ಕೊಳಲು ನುಡಿಸುತ್ತಿದ್ದ ಎಸ್ಪಿಬಿ, ಟೈಫಾಯ್ಡ್ ಬಂದು ಎಂಜಿನಿಯರಿಂಗ್ ಅರ್ಧಕ್ಕೆ ಬಿಟ್ಟರೂ ಸಂಗೀತ ಅವರನ್ನು ಕೈಬಿಡಲಿಲ್ಲ. 1966ರಲ್ಲಿ ಹಾಡಲು ಶುರು ಮಾಡಿದ ಅವರು ಈಗ ವಯಸ್ಸು 70 ಆದರೂ ಮಧುರ ಶಾರೀರವನ್ನು ಕಳೆದುಕೊಂಡಿಲ್ಲ. ಅವರಿಗೆ ಆ ಕಾಲದಲ್ಲೇ ಅಪಾರ ಖ್ಯಾತಿಯನ್ನು ತಂದುಕೊಟ್ಟ 'ಶಂಕರಾಭರಣಂ' ಚಿತ್ರದ 'ಶಂಕರಾ...' ಎನ್ನುವ ಹಾಡನ್ನು ಈಗಲೂ ವೇದಿಕೆಯಲ್ಲಿ ಎಸ್ಪಿಬಿ ಹಾಡಿದರೆ ಕೇಳುಗರ ಮೈ ಜುಮ್ ಎನ್ನುತ್ತದೆ ಎನ್ನುವುದು ನಿಜಕ್ಕೂ ಅದ್ಭುತವೇ. ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65